# ಮೋರಿ

ನನ್ನನ್ನು ಕಂಡು ಹೇಸಿಗೆ
ಪಡುವವರಿಗೆಲ್ಲಾ ನನ್ನದೊಂದು ಪ್ರಶ್ನೆ–
ಬುಧವಾರಪೇಟೆಯ ಅವಳ ಕೋಣೆಯಿಂದ
ತೀಟೆ ತೀರಿಸಿಕೊಂಡು ಹೊರ ಕಾಲಿಟ್ಟು
ನನ್ನ ದಾಟುವಾಗ ಅಸಹ್ಯವೆನಿಸಲಿಲ್ಲವೇ?

ನಡು ಬೇಸಿಗೆಯ ಬೆವರಿನೊಂದಿಗೆ
ನೀರಿಗಾಗಿ ಪರದಾಡುವಾಗ
ಮಳೆಗಾಲದಲ್ಲಿ ನನ್ನೊಳಗಿಂದ ಬರಿದೇ
ಹರಿದು ಪೋಲಾದ ನೀರು ನೆನಪಾಗುತ್ತಿಲ್ಲವೇ?

ನಿಮ್ಮವೇ ಬಚ್ಚಲಿನಿಂದ ಬಂದ ದುರ್ನಾತದ
ದ್ರವ್ಯಗಳನ್ನು ಸಾರಾಸಗಟಾಗಿ ನನ್ನಲ್ಲಿ ಸೇರಿಸಿ
ರಸ್ತೆಯ ಬದಿಯುದ್ದಕ್ಕೂ ತುಂಬಿ ಹರಿಯುವಾಗ
ಕಿವುಚಿದ ಮುಖದಲ್ಲಿ ಮೂಗು ಮುಚ್ಚಿಕೊಂಡು
ಬೇಗ ನಡೆದು ಸಾಗುವಿರಿ...
ಬಹುಶಃ ಒಮ್ಮೆ ನಾನು ಪೂರ್ತಿ
ಬಾಯ್ತೆರೆದರೆ ಸತ್ತೇ ಹೋಗುವಿರಿ!...

ಗಬ್ಬು ಮೋರಿ ಎಂದು ಅಲ್ಲಗಳೆಯುವ
ನೀವು ಎಸೆದ ಅಂದೇ ಹುಟ್ಟಿದ
ಹೆಣ್ಣು ಹಸುಳೆಯನ್ನು ಜತನದಿಂದ ಕಾದಿದ್ದೇನೆ,
ಹೊರದೂಡಿದ ಯಾರದೋ ಮನೆಯ
ಸೊಸೆಯ ಕಣ್ಣೀರು
ನನ್ನಲ್ಲಿ ಹರಿಯಲು ಬಿಟ್ಟಿದ್ದೇನೆ.

ನನ್ನ ದಿನಚರಿಯಂತೆ ನಿತ್ಯ ಪ್ರಾಸವಿಲ್ಲದ
ನಿಷ್ಠುರ ಕವಿತೆಗಳನ್ನು ಬರೆದಿಡುತ್ತಿದ್ದೇನೆ
ಕೆಲವೇ ದಿನಗಳಲ್ಲಿ ನನ್ನ ಪಕ್ಕದ ಗೋಡೆಯ
ಸಿನಿಮಾ ಪೋಸ್ಟರ್ ಬಳಿ ಹಚ್ಚುತ್ತೇನೆ
ಬೇಗನೇ ಬಂದು ಓದಿ ಬಿಡಿ.
ಯಾಕೆಂದರೆ, ಇನ್ನು ಕೆಲವೇ ದಿನಗಳಲ್ಲಿ
ನಾನು ಬಾಯ್ತೆರೆಯುತ್ತೇನೆ.



ವಾಗೀಶ ಹೆಗಡೆ

● ಅಭಿಷೇಕ್ ಪೈ